# ಹೋಳಿ

ಹಬ್ಬಗಳ ತವರೂರಾದ ಭಾರತ ದೇಶದಲ್ಲಿ ಶಿವರಾತ್ರಿಯ ನಂತರ ಬರುವ ಆಧ್ಯಾತ್ಮಿಕ ಹಿನ್ನೆಲೆ ಇರುವ ಹಬ್ಬವೆಂದರೆ ಹೋಳಿ. ಹೋಳಿ ಹಬ್ಬವು ಉತ್ತರಭಾರತದಲ್ಲಿ 'ಹೋಳಿ', 'ಹೋಲಿಕಾ ದಹನ",'ಧುರಿಯಾ' ಎಂದೂ, ಮಹಾರಾಷ್ಟ್ರದಲ್ಲಿ 'ಹೋಳಿ', 'ರಂಗಪಂಚಮಿ', 'ಧೂಲಿವಂದನ' ಎಂದೂ, ಉತ್ತರಕರ್ನಾಟಕದಲ್ಲಿ 'ಹೋಳಿ', ಕಾಮಣ್ಣನ ಹಬ್ಬವೆಂದು ಪ್ರಚಲಿತವಾಗಿದೆ.ಫಾಲ್ಗುಣ ಮಾಸದ ಹುಣ್ಣಿಮೆಯ ದಿನ 'ಹೋಳಿ' ಹಬ್ಬವನ್ನು ಆಚರಿಸುವರು. ತದನಂತರ 'ರಂಗಪಂಚಮಿ', ಬಣ್ಣವನ್ನು ಹಾಕಿ ಬಣ್ಣದ ಹಬ್ಬ ಆಚರಿಸುತ್ತಾರೆ.

ನಿಜವಾದ ಹೋಳಿ ಎಂದರೆ 'ಹೊಲಿ' ಪವಿತ್ರತೆ. ಪವಿತ್ರತೆಯೆ ಸುಖ ಶಾಂತಿಯ ಜನನಿ. ಪರಮಪಿತ ಪರಮಜ್ಯೋತಿ ನೀರಾಕಾರ ಪರಮಾತ್ಮನು ಪರಮಪವಿತ್ರನಾಗಿದ್ದಾನೆ. ಅವನ ಮುಖ್ಯ ಸಂದೇಶವೆ 'ಪವಿತ್ರರಾಗಿ ಯೋಗಿಗಳಾಗಿ' ಎಂದು. ಪವಿತ್ರತೆ ಎಂದರೆ ಬ್ರಹ್ಮಚರ್ಯಮಾತ್ರವಲ್ಲ, ಮನ ವಚನ ಕರ್ಮ ಸಂಬಂಧ ಸಂಪರ್ಕಗಳಲ್ಲಿ ಪವಿತ್ರತೆ. ಇದನ್ನು ಸಂಪೂರ್ಣವಾಗಿ ಪಾಲಿಸುವವನು ನೀಜವಾದ ಯೋಗಿ. ಇಂದು ಕಲಿಯುಗ ಅಂತಿಮ ಚರಣದಲ್ಲಿದೆ. ಕಲಿಯುಗದ ಅಂತ್ಯ ಮತ್ತು ಸತ್ಯಯುಗದ ಆರಂಭದ ಸಂದಿಗ್ಧ ಕಾಲವೇ ಸಂಗಮಯುಗ. ಪ್ರತಿಯೊಬ್ಬ ಮಾನವನಿಗೆ ಸತ್ಯಯುಗದ ದೈವೀಪದವಿಯನ್ನು ಪಡೆಯುವ ಈಶ್ವರೀಯ ಜನ್ಮಸಿದ್ಧ ಅಧಿಕಾರ ಇದೆ. ಆ ಅಧಿಕಾರವನ್ನು ಸ್ವಯಂ ನಿರಾಕಾರ ಪರಮಾತ್ಮನೇ ಈ ಧರೆಗೆ ಅವತರಿಸಿ, ಈಶ್ವರೀಯ ವಿಶ್ವ ವಿದ್ಯಾಲಯದ ಮೂಲಕ ಕಲಿಸುವ ಜ್ಞಾನ ಮತ್ತು ರಾಜಯೋಗದ ಅಭ್ಯಾಸದಿಂದ ಪಡೆಯಬಹುದು. ಪವಿತ್ರತೆ ಹಾಗೂ ದೈವೀಗುಣಗಳ ಧಾರಣೆಯಿಂದ, ಕಾಮದಹನದ ಜೊತೆ-ಜೊತೆಗೆ ಕ್ರೋಧ, ಲೋಭ, ಮೋಹ, ಅಹಂಕಾರ ಮುಂತಾದ ಆಸುರಿ ಗುಣಗಳ ತ್ಯಾಗದಿಂದ ದೇವಿ-ದೇವತಾ ಪದವಿಯು ಪ್ರಾಪ್ತವಾಗುವುದು. ಮಾನವನು ಸರ್ವಗುಣ ಸಂಪನ್ನ, 16 ಕಲಾಸಂಪೂರ್ಣ, ಮರ್ಯಾದಾ ಪುರುಷೋತ್ತಮ, ಅಹಿಂಸಾ ಪರಮೋಧರ್ಮಿ, ಸಂಪೂರ್ಣ ನಿರ್ವಿಕಾರಿ ಆಗುವನು. ಈ ನರಕದ ಮಹಾವಿನಾಶದ ನಂತರ ಸತ್ಯಯುಗವು ಬರುವುದು. ಈಗ ನಾವುಎಲ್ಲರು ಪರಮಾತ್ಮನ ಜೊತೆಯಲ್ಲಿ ಇದ್ದರೆ ಅವನ ಸಂಗದ ರಂಗಿನಿಂದ ಸ್ವರ್ಗದಲ್ಲಿ ದೇವಿ ದೇವತೆಗಳಾಗಿ ಬರುತ್ತೆವೆ."

ಜ್ಞಾನಿ ಮತ್ತು ಯೋಗಿಗಳ ದೃಷ್ಟಿಯಲ್ಲಿ ಮನುಷ್ಯ ಸೃಷ್ಟಿಯು ವಿರಾಟ ನಾಟಕವಾಗಿದೆ. ಈ ಸೃಷ್ಟಿರೂಪಿ ನಾಟಕದಲ್ಲಿ ಎರಡು ಬಣ್ಣಗಳ ಆಟ ನಡೆಯುತ್ತದೆ. ಒಂದು ಮಾಯೆಯ ಬಣ್ಣ ಎರಡನೇಯದು ಈಶ್ವರನ ಬಣ್ಣ. ಈ ರಂಗಮಂಟಪದಲ್ಲಿ ಪ್ರತಿಯೊಬ್ಬನು ಯಾವದಾದರು ಒಂದು ಬಣ್ಣವನ್ನು ಹಚ್ಚಿಕೊಂಡಿರುವನು. ಈಶ್ವರೀಯ ಬಣ್ಣವನ್ನು ಹಚ್ಚಿಕೊಂಡಿರುವನು ನಿಜವಾಗಿಯೂ ಯೋಗಿ ಆಗುತ್ತಾನೆ ಮತ್ತು ಮಾಯೆಯ ರಂಗಿನಲ್ಲಿ ಇರುವವನು ಭೋಗಿ ಆಗಿರುತ್ತಾನೆ.

ವಾಸ್ತವವಾಗಿ 'ಹೋಳಿ' ಮತ್ತು 'ರಂಗಪಂಚಮಿ' ಸಂತೋಷ, ಪ್ರೀತಿ, ಸ್ನೇಹ, ಆತ್ಮೀಯತೆಯನ್ನು ವೃದ್ಧಿಸುವ ಹಬ್ಬ. 'ಹೋಳಿ' ಹಬ್ಬವು ಅತಿ ಪ್ರಾಚೀನ ಕಾಲದಿಂದ ಆಚರಣೆಯಲ್ಲಿದೆ ಎಂದು ಭಾರತೀಯರ ನಂಬಿಕೆ ಇದೆ. ಇದರ ಬಗ್ಗೆ ವೇದಕಾಲೀನ 'ರಕ್ಷೋಹಗಂ ಬಲಗಹಮ್' ಮುಂತಾದ ರಾಕ್ಷಸರು ವಿನಾಶಕ ಮಂತ್ರಗಳಿಂದ 'ಹೋಲಿಕಾದಹನ' ಮಾಡುತ್ತಿದ್ದರು. ಇದರ

ಸತ್ಯಾರ್ಥ 'ನಾವು ರಾಕ್ಷಸಿ ಆಹಾರ, ಆಚಾರ, ವಿಚಾರ ವ್ಯವಹಾರಗಳಿಂದ ನಮ್ಮನ್ನು ರಕ್ಷಿಸಬೇಕೆಂದು'. ಹೋಲಿಕಾದಹನ ನಮಗೆ ಈ ಮಾತನ್ನು ನೆನಪಿಸಿಕೊಡುತ್ತವೆ 'ಪಾಪಿ ತನ್ನದೇ ಪಾಪ ಕರ್ಮಗಳಿಂದ ಸುಟ್ಟು ಹೊಗುವನು.' ಅದರಿಂದ ನಾವು ಪಾಪಕರ್ಮಗಳಿಂದ ದೂರ ಇರಬೇಕು. ನಮ್ಮ ಜೀವನದಲ್ಲಿ ದೈವೀಗುಣಗಳ ಧಾರಣೆ ಮಾಡಿಕೊಳ್ಳಬೇಕು. ಹೋಳಿಯನ್ನು ದಹನ ಮಾಡಿ ಕಳೆದ ವರ್ಷದ ಕಹಿ, ನೆನಪುಗಳನ್ನು ಸುಟ್ಟು, ತಮ್ಮ ದುಃಖಗಳನ್ನು ಮರೆತು, ನಗುನಗುತ್ತಾ ಹೊಸ ವರ್ಷದ ಸ್ವಾಗತ ಬಯಸುವದು ಆಗಿದೆ. ಕಟ್ಟಿಗೆಗಳಿಂದ ಕಾಮಣ್ಣನ ದಹನ ಮಾಡಲಾರದೇ, ನಮ್ಮಲ್ಲಿ ಇರುವ ಕಾಮ, ಕ್ರೋಧ, ಇರ್ಷೆ ದ್ವೇಷ, ಮದ, ಮತ್ಸರಗಳನ್ನು ಸುಡಬೇಕು. ಪರಸ್ಪರ ಆತ್ಮೀಯತೆ, ಸ್ನೇಹ, ಪ್ರೀತಿ ಬೆಳೆಸಿ ಸಿಹಿ ತಿಂಡಿ ತಿನಿಸುಗಳನ್ನು ಸ್ವೀಕರಿಸಬೇಕು. 'ಹೋಳಿ' ಅಥವಾ 'ಕಾಮಣ್ಣ–ರತಿದೇವಿ'ಯ ದಹನ ಆದ ನಂತರ ಬಣ್ಣವನ್ನೂ ಹಾಕುವರು. ಸ್ಥೂಲವಾಗಿ ಬಣ್ಣವನ್ನು ಆಡುವಾಗ ದೊಡ್ಡವರು, ಚಿಕ್ಕವರು ಎಂಬ ಭೇದಭಾವ ಮರೆತು ಬಣ್ಣವನ್ನು ಆಡುವರು. ಅದರ ನಿಜವಾದ ಅರ್ಥ ಏನೆಂದರೆ, ನಾವೆಲ್ಲರೂ ಒಬ್ಬ ಭಗವಂತನ ಮಕ್ಕಳು ಎಂದು ತಿಳಿದು ಸತ್ಯಜ್ಞಾನದ, ಸತ್ಸಂಗದ, ದೈವೀ ಗುಣಗಳ ನಿಜವಾದ ಬಣ್ಣ ಹಾಕಿ ಸರ್ವರನ್ನೂ ಸಹೋದರತ್ವದ ಭಾವನೆಯಿಂದ ಕಾಣಬೇಕು. ಪರಮಪಿತ ಪರಮಾತ್ಮನ ಧ್ಯಾನ ಅಥವಾ ಸಹಜ ರಾಜಯೋಗದಿಂದ ನಮ್ಮ ಜೀವನದಲ್ಲಿ ದೈವೀ ಗುಣಗಳ ಧಾರಣೆ ಆಗುತ್ತದೆ. ಎಕಂದರೆ 'ಸಂಗು ದಂತೆ ರಂಗು' ಎಂಬ ಗಾಯನವು ಇದೆ. ಪರಮಾತ್ಮನು ಸರ್ವ ಗುಣಗಳ ಸಾಗರನಾಗಿದ್ದಾನೆ. ಅತ್ಮಜ್ಯೋತಿಗಳಾದ ನಾವು, ಅವನ ಜೊತೆಗೆ ಸರ್ವಸಂಬಂಧವನ್ನು ಬೆಳೆಸಿದರೆ ಗುಣಮೂರ್ತಿ ಅಗಬಹುದು.

ಹಿಂದಿ ಭಾಷೆಯಲ್ಲಿ 'ಹೋ–ಲಿ', ಅಂದರೆ ಆಗಿಹೊದದ್ದನ್ನು ಮರೆತು ಬಿಡಬೇಕು, ಇಂಗ್ಲಿಷ ಭಾಷೆಯಲ್ಲಿ 'ಹೊಲಿ' ಅಂದರೆ ಪವಿತ್ರತೆ. ನಮ್ಮ ಆಚಾರ, ವಿಚಾರ ವ್ಯವಹಾರಗಳನ್ನು ಶುದ್ಧಗೊಳಿಸಬೇಕು. ಪರಸ್ಪರರಲ್ಲಿ ಆತ್ಮೀಯತೆಯನ್ನು ಬೆಳೆಸಿ, ಸದ್ಗುಣಗಳಿಂದ ಕೂಡಿದ, ಸತ್ಯಜ್ಞಾನದ ಬಣ್ಣವನ್ನು ಹಚ್ಚಿಸಿ ನಾವು ಹೋಳಿಯನ್ನು ಆಚರಿಸಿದರೆ ನಮ್ಮ ಜೀವನವೂ ಮಂಗಳಮಯ(ಹೊಲಿ)ವಾಗುವುದು.

***ವಿಶ್ವಾಸ ಸೋಹೋನಿ,***
***ಧಾರವಾಡ.***

# ಹೋಳಿ

ಹಬ್ಬಗಳ ತವರೂರಾದ ಭಾರತ ದೇಶದಲ್ಲಿ ಶಿವರಾತ್ರಿಯ ನಂತರ ಬರುವ ಆಧ್ಯಾತ್ಮಿಕ ಹಿನ್ನೆಲೆ ಇರುವ ಹಬ್ಬವೆಂದರೆ ಹೋಳಿ. ಹೋಳಿ ಹಬ್ಬವು ಉತ್ತರಭಾರತದಲ್ಲಿ 'ಹೋಳಿ', 'ಹೋಲಿಕಾ ದಹನ",'ಧುರಿಯಾ' ಎಂದೂ, ಮಹಾರಾಷ್ಟ್ರದಲ್ಲಿ 'ಹೋಳಿ', 'ರಂಗಪಂಚಮಿ', 'ಧೂಲಿವಂದನ' ಎಂದೂ, ಉತ್ತರಕರ್ನಾಟಕದಲ್ಲಿ 'ಹೋಳಿ', ಕಾಮಣ್ಣನ ಹಬ್ಬವೆಂದು ಪ್ರಚಲಿತವಾಗಿದೆ.

ಫಾಲ್ಗುಣ ಮಾಸದ ಹುಣ್ಣಿಮೆಯ ದಿನ 'ಹೋಳಿ' ಹಬ್ಬವನ್ನು ಆಚರಿಸುವರು. ತದನಂತರ 'ರಂಗಪಂಚಮಿ', ಬಣ್ಣವನ್ನು ಹಾಕಿ ಬಣ್ಣದ ಹಬ್ಬ ಆಚರಿಸುತ್ತಾರೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ಹಬ್ಬದ ಆಚರಣೆ ಸಂಪೂರ್ಣ ಬದಲಾಗಿದ್ದು, ವ್ಯಭಿಚಾರ, ಹಿಂಸಾಚಾರದ ರೂಪ ತಾಳುತ್ತಿದೆ. ಹೋಳಿಯ ಹಬ್ಬದಲ್ಲಿ ಹೋಳಿಯನ್ನು ಸುಡಲು ಕಟ್ಟಿಗೆಯ ಸಂಗ್ರಹಣೆ, ಚಂದಾ ವಸೂಲಿ, ಹಲಗೆಯ ಕರ್ಕಶ ಧ್ವನಿ ಮಿತಿಮೀರುತ್ತಿವೆ. ಬಣ್ಣದ ಹಬ್ಬ ತನ್ನ ನಿಜ ಬಣ್ಣವನ್ನು ಕಳೆದುಕೊಳ್ಳುತ್ತಿದೆ. ನೈಸರ್ಗಿಕ ಬಣ್ಣಗಳ ಬದಲಾಗಿ ಆರೋಗ್ಯಕ್ಕೆ ಹಾನಿ ಮಾಡುವ ಆಮ್ಲ, ರಾಸಾಯನಿಕ ಬಣ್ಣ, ಡಾಂಬರ, ಶಗಣಿ, ಮುಂತಾದ ಪದಾರ್ಥಗಳು ಬಳಕೆಯಾಗುತ್ತಲಿವೆ. ಇದರಿಂದ ನಮ್ಮ ಈ ಬಡ ದೇಶದಲ್ಲಿ ಕೊಟ್ಯಾಂತರ ರೂಪಾಯಿಗಳ ಬಣ್ಣ ಹಾಗೂ ಬಟ್ಟೆಗಳು ನಷ್ಟವಾಗುತ್ತದೆ. ಶಾಂತಿ ಸುವ್ಯವಸ್ಥೆಗಾಗಿ ಅಪಾರ ಹಣ ಖರ್ಚವಾಗುತ್ತದೆ. ಇದರಿಂದ ಅನೇಕರಿಗೆ ಖುಷಿಯ ಬದಲಾಗಿ ದು:ಖವಾಗುತ್ತದೆ. ಹಾಗೂ ದೇಶದ ಧನ, ಬಡವರ ಸಹಾಯಕ್ಕೆ ಬರಲಾರದೇ ಹೋಳಿಯ ಬೂದಿಯಾಗಿ ವ್ಯರ್ಥವಾಗುತ್ತಿದೆ. ಇದರ ಪರಿಣಾಮ ಹಬ್ಬ ಆಚರಣೆ ಮಾಡುವವರ ಸಂಖ್ಯೆ ಪ್ರತಿವರ್ಷ ಕಡಿಮೆ ಆಗುತ್ತಿದೆ. ವಾಸ್ತವಿಕವಾಗಿ ಹೋಳಿಯ ಆಧ್ಯಾತ್ಮಿಕ ರಹಸ್ಯವನ್ನು ತಿಳಿದು ಹಬ್ಬವನ್ನು ಆಚರಿಸಿದ್ದರೆ ಮಾನವ ಜೀವನದಲ್ಲಿ ಹೊಸತನವು ಬರಬಹುದು.

ನಿಜವಾದ ಹೋಳಿ ಎಂದರೆ 'ಹೊಲಿ' ಪವಿತ್ರತೆ. ಪವಿತ್ರತೆಯೆ ಸುಖ ಶಾಂತಿಯ ಜನನಿ. ಪರಮಪಿತ ಪರಮಜ್ಯೋತಿ ನೀರಾಕಾರ ಪರಮಾತ್ಮನು ಪರಮಪವಿತ್ರನಾಗಿದ್ದಾನೆ. ಅವನ ಮುಖ್ಯ ಸಂದೇಶವೆ 'ಪವಿತ್ರರಾಗಿ ಯೋಗಿಗಳಾಗಿ' ಎಂದು. ಪವಿತ್ರತೆ ಎಂದರೆ ಬ್ರಹ್ಮಚರ್ಯಮಾತ್ರವಲ್ಲ, ಮನ ವಚನ ಕರ್ಮ ಸಂಬಂಧ ಸಂಪರ್ಕಗಳಲ್ಲಿ ಪವಿತ್ರತೆ. ಇದನ್ನು ಸಂಪೂರ್ಣವಾಗಿ ಪಾಲಿಸುವವನು ನೀಜವಾದ ಯೋಗಿ. ಇಂದು ಕಲಿಯುಗ ಅಂತಿಮ ಚರಣದಲ್ಲಿದೆ. ಕಲಿಯುಗದ ಅಂತ್ಯ ಮತ್ತು ಸತ್ಯಯುಗದ ಆರಂಭದ ಸಂದಿಗ್ಧ ಕಾಲವೇ ಸಂಗಮಯುಗ. ಪ್ರತಿಯೊಬ್ಬ ಮಾನವನಿಗೆ ಸತ್ಯಯುಗದ ದೈವೀಪದವಿಯನ್ನು ಪಡೆಯುವ ಈಶ್ವರೀಯ ಜನ್ಮಸಿದ್ಧ ಅಧಿಕಾರ ಇದೆ. ಆ ಅಧಿಕಾರವನ್ನು ಸ್ವಯಂ ನಿರಾಕಾರ ಪರಮಾತ್ಮನೇ ಈ ಧರೆಗೆ ಅವತರಿಸಿ, ಈಶ್ವರೀಯ ವಿಶ್ವ ವಿದ್ಯಾಲಯದ ಮೂಲಕ ಕಲಿಸುವ ಜ್ಞಾನ ಮತ್ತು ರಾಜಯೋಗದ ಅಭ್ಯಾಸದಿಂದ ಪಡೆಯಬಹುದು. ಪವಿತ್ರತೆ ಹಾಗೂ ದೈವೀಗುಣಗಳ ಧಾರಣೆಯಿಂದ, ಕಾಮದಹನದ ಜೊತೆ-ಜೊತೆಗೆ ಕ್ರೋಧ, ಲೋಭ, ಮೋಹ, ಅಹಂಕಾರ ಮುಂತಾದ ಆಸುರಿ ಗುಣಗಳ ತ್ಯಾಗದಿಂದ ದೇವಿ-ದೇವತಾ ಪದವಿಯು ಪ್ರಾಪ್ತವಾಗುವುದು. ಮಾನವನು ಸರ್ವಗುಣ ಸಂಪನ್ನ, 16 ಕಲಾಸಂಪೂರ್ಣ, ಮರ್ಯಾದಾ ಪುರುಷೋತ್ತಮ, ಅಹಿಂಸಾ ಪರಮೋಧರ್ಮಿ, ಸಂಪೂರ್ಣ ನಿರ್ವಿಕಾರಿ ಆಗುವನು. ಈ ನರಕದ ಮಹಾವಿನಾಶದ ನಂತರ ಸತ್ಯಯುಗವು ಬರುವುದು. ಈಗ ನಾವುಎಲ್ಲರು ಪರಮಾತ್ಮನ ಜೊತೆಯಲ್ಲಿ ಇದ್ದರೆ ಅವನ ಸಂಗದ ರಂಗಿನಿಂದ ಸ್ವರ್ಗದಲ್ಲಿ ದೇವಿ ದೇವತೆಗಳಾಗಿ ಬರುತ್ತೆವೆ."

ಜ್ಞಾನಿ ಮತ್ತು ಯೋಗಿಗಳ ದೃಷ್ಟಿಯಲ್ಲಿ ಮನುಷ್ಯ ಸೃಷ್ಟಿಯು ವಿರಾಟ ನಾಟಕವಾಗಿದೆ. ಈ ಸೃಷ್ಟಿರೂಪಿ ನಾಟಕದಲ್ಲಿ ಎರಡು ಬಣ್ಣಗಳ ಆಟ ನಡೆಯುತ್ತದೆ. ಒಂದು ಮಾಯೆಯ ಬಣ್ಣ ಎರಡನೇಯದು ಈಶ್ವರನ ಬಣ್ಣ. ಈ ರಂಗಮಂಟಪದಲ್ಲಿ ಪ್ರತಿಯೊಬ್ಬನು ಯಾವದಾದರು ಒಂದು ಬಣ್ಣವನ್ನು ಹಚ್ಚಿಕೊಂಡಿರುವನು. ಈಶ್ವರೀಯ ಬಣ್ಣವನ್ನು ಹಚ್ಚಿಕೊಂಡಿರುವನು ನಿಜವಾಗಿಯೂ ಯೋಗಿ ಆಗುತ್ತಾನೆ ಮತ್ತು ಮಾಯೆಯ ರಂಗಿನಲ್ಲಿ ಇರುವವನು ಭೋಗಿ ಆಗಿರುತ್ತಾನೆ.

ವಾಸ್ತವವಾಗಿ 'ಹೋಳಿ' ಮತ್ತು 'ರಂಗಪಂಚಮಿ' ಸಂತೋಷ, ಪ್ರೀತಿ, ಸ್ನೇಹ, ಆತ್ಮೀಯತೆಯನ್ನು ವೃದ್ಧಿಸುವ ಹಬ್ಬ. 'ಹೋಳಿ' ಹಬ್ಬವು ಅತಿ ಪ್ರಾಚೀನ ಕಾಲದಿಂದ ಆಚರಣೆಯಲ್ಲಿದೆ ಎಂದು ಭಾರತೀಯರ ನಂಬಿಕೆ ಇದೆ. ಇದರ ಬಗ್ಗೆ ವೇದಕಾಲೀನ 'ರಕ್ಷೋಹಗಂ ಬಲಗಹಮ್' ಮುಂತಾದ ರಾಕ್ಷಸರು ವಿನಾಶಕ ಮಂತ್ರಗಳಿಂದ 'ಹೋಲಿಕಾದಹನ' ಮಾಡುತ್ತಿದ್ದರು. ಇದರ ಸತ್ಯಾರ್ಥ 'ನಾವು ರಾಕ್ಷಸಿ ಆಹಾರ, ಆಚಾರ, ವಿಚಾರ ವ್ಯವಹಾರಗಳಿಂದ ನಮ್ಮನ್ನು ರಕ್ಷಿಸಬೇಕೆಂದು'. ಹೋಲಿಕಾದಹನ ನಮಗೆ ಈ ಮಾತನ್ನು ನೆನಪಿಸಿಕೊಡುತ್ತವೆ 'ಪಾಪಿ ತನ್ನದೇ ಪಾಪ ಕರ್ಮಗಳಿಂದ ಸುಟ್ಟು ಹೊಗುವನು.' ಅದರಿಂದ ನಾವು ಪಾಪಕರ್ಮಗಳಿಂದ ದೂರ ಇರಬೇಕು. ನಮ್ಮ ಜೀವನದಲ್ಲಿ ದೈವೀಗುಣಗಳ ಧಾರಣೆ ಮಾಡಿಕೊಳ್ಳಬೇಕು. ಹೋಳಿಯನ್ನು ದಹನ ಮಾಡಿ ಕಳೆದ ವರ್ಷದ ಕಹಿ, ನೆನಪುಗಳನ್ನು ಸುಟ್ಟು, ತಮ್ಮ ದುಃಖಗಳನ್ನು ಮರೆತು, ನಗುನಗುತ್ತಾ ಹೊಸ ವರ್ಷದ ಸ್ವಾಗತ ಬಯಸುವದು ಆಗಿದೆ. ಕಟ್ಟಿಗೆಗಳಿಂದ ಕಾಮಣ್ಣನ ದಹನ ಮಾಡಲಾರದೇ, ನಮ್ಮಲ್ಲಿ ಇರುವ ಕಾಮ, ಕ್ರೋಧ, ಇರ್ಷೆ ದ್ವೇಷ, ಮದ, ಮತ್ಸರಗಳನ್ನು ಸುಡಬೇಕು. ಪರಸ್ಪರ ಆತ್ಮೀಯತೆ, ಸ್ನೇಹ, ಪ್ರೀತಿ ಬೆಳೆಸಿ ಸಿಹಿ ತಿಂಡಿ ತಿನಿಸುಗಳನ್ನು ಸ್ವೀಕರಿಸಬೇಕು. 'ಹೋಳಿ' ಅಥವಾ 'ಕಾಮಣ್ಣ–ರತಿದೇವಿ'ಯ ದಹನ ಆದ ನಂತರ ಬಣ್ಣವನ್ನೂ ಹಾಕುವರು. ಸ್ಥೂಲವಾಗಿ ಬಣ್ಣವನ್ನು ಆಡುವಾಗ ದೊಡ್ಡವರು, ಚಿಕ್ಕವರು ಎಂಬ ಭೇದಭಾವ ಮರೆತು ಬಣ್ಣವನ್ನು ಆಡುವರು. ಅದರ ನಿಜವಾದ ಅರ್ಥ ಏನೆಂದರೆ, ನಾವೆಲ್ಲರೂ ಒಬ್ಬ ಭಗವಂತನ ಮಕ್ಕಳು ಎಂದು ತಿಳಿದು ಸತ್ಯಜ್ಞಾನದ, ಸತ್ಸಂಗದ, ದೈವೀ ಗುಣಗಳ ನಿಜವಾದ ಬಣ್ಣ ಹಾಕಿ ಸರ್ವರನ್ನೂ ಸಹೋದರತ್ವದ ಭಾವನೆಯಿಂದ ಕಾಣಬೇಕು. ಪರಮಪಿತ ಪರಮಾತ್ಮನ ಧ್ಯಾನ ಅಥವಾ ಸಹಜ ರಾಜಯೋಗದಿಂದ ನಮ್ಮ ಜೀವನದಲ್ಲಿ ದೈವೀ ಗುಣಗಳ ಧಾರಣೆ ಆಗುತ್ತದೆ. ಎಕಂದರೆ 'ಸಂಗು ದಂತೆ ರಂಗು' ಎಂಬ ಗಾಯನವು ಇದೆ. ಪರಮಾತ್ಮನು ಸರ್ವ ಗುಣಗಳ ಸಾಗರನಾಗಿದ್ದಾನೆ. ಅತ್ಮಜ್ಯೋತಿಗಳಾದ ನಾವು, ಅವನ ಜೊತೆಗೆ ಸರ್ವಸಂಬಂಧವನ್ನು ಬೆಳೆಸಿದರೆ ಗುಣಮೂರ್ತಿ ಅಗಬಹುದು.

ಹಿಂದಿ ಭಾಷೆಯಲ್ಲಿ 'ಹೋ–ಲಿ', ಅಂದರೆ ಆಗಿಹೊದದ್ದನ್ನು ಮರೆತು ಬಿಡಬೇಕು, ಇಂಗ್ಲಿಷ ಭಾಷೆಯಲ್ಲಿ 'ಹೊಲಿ' ಅಂದರೆ ಪವಿತ್ರತೆ. ನಮ್ಮ ಆಚಾರ, ವಿಚಾರ ವ್ಯವಹಾರಗಳನ್ನು ಶುದ್ಧಗೊಳಿಸಬೇಕು. ಪರಸ್ಪರರಲ್ಲಿ ಆತ್ಮೀಯತೆಯನ್ನು ಬೆಳೆಸಿ, ಸದ್ಗುಣಗಳಿಂದ ಕೂಡಿದ, ಸತ್ಯಜ್ಞಾನದ ಬಣ್ಣವನ್ನು ಹಚ್ಚಿಸಿ ನಾವು ಹೋಳಿಯನ್ನು ಆಚರಿಸಿದರೆ ನಮ್ಮ ಜೀವನವೂ ಮಂಗಳಮಯ(ಹೊಲಿ)ವಾಗುವುದು.

*ವಿಶ್ವಾಸ ಸೋಹೋನಿ,*
*ಧಾರವಾಡ.*